ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/01/ಇಎಸ್‌ಟಿ(9)/2019 / 986

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001.
ದಿನಾಂಕ: 07-09-2019.

## ಹಿಂಬರಹ

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 16 ಎಸ್‌ಎಂಆರ್ 2019 ದಿನಾಂಕ:05/08/2019 ರ ಪ್ರತಿಯನ್ನು ಮಾಹಿತಿಗಾಗಿ ಈ ಕೆಳಕಂಡವರಿಗೆ ಕಳುಹಿಸಿಕೊಡಲಾಗಿದೆ.

1. ಈ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು, ಸ್ಟೆರಿಕ್ ಸಂಸ್ಥೆ ಬೆಂಗಳೂರು, ಸರ್ಕಾರಿ ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ [ಇಲಾಖಾ ವೆಬ್‌ಸೈಟ್ ಮುಖಾಂತರ]
2. ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ, ಜಂಟಿ ನಿರ್ದೇಶಕರು(ಆಡಳಿತ), ಸಹಾಯಕ ಆಡಳಿತಾಧಿಕಾರಿ (2) ಹಾಗೂ (3), ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ರಿಜಿಸ್ಟ್ರಾರ್ (ಆಡಳಿತ) ಮಾಹಿತಿಗಾಗಿ
3. ನಿರ್ದೇಶಕರ ಆಪ್ತ ಶಾಖೆಗೆ
4. ಈ ನಿರ್ದೇಶನಾಲಯದ ಇ.ಎಸ್.ಟಿ (8)ಬಿ ಮತ್ತು ಇ.ಎಸ್.ಟಿ (8)ಸಿ ವಿಭಾಗಗಳಿಗೆ ಮಾಹಿತಿಗಾಗಿ
5. ಈ ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ

ಆಡಳಿತಾಧಿಕಾರಿ

Sh-est(9) Endsmnt

6767

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 ರಡಿಯಲ್ಲಿ ರಾಜ್ಯ ಸರ್ಕಾರಿ ನೌಕರರು ಮುಂದುವರೆದ ವೈದ್ಯಕೀಯ ಚಿಕಿತ್ಸೆಯ ಮರುಪಾವತಿ ಸೌಲಭ್ಯ ಪಡೆಯಲು ಸಲ್ಲಿಸುವ ಔಷಧಿ ಖರೀದಿಯ ಬಿಲ್ಲುಗಳಿಗೆ ವೈದ್ಯಾಧಿಕಾರಿಯ ಸಹಿ/ಮೊಹರು ಪಡೆಯುವ ಅಗತ್ಯತೆ ಬಗ್ಗೆ.

**ಓದಲಾಗಿದೆ:** (1) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:09.05.2019ರಂದು ನಡೆದ ಸಭೆಯ ನಡವಳಿಗಳು.

(2) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 48 ಸೇನಿಎಫ್ 2014, ದಿನಾಂಕ:14.03.2018.

(3) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರ ಪತ್ರ ಸಂಖ್ಯೆ: ಜೆಡಿಎಂ/ಎಂ.ಡಿ.ಪಿ./01/2019-20, ದಿನಾಂಕ:08.05.2019.

(4) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 5 ಎಸ್‌ಆರ್‌ಪಿ 1996, ದಿನಾಂಕ:28.12.1996.

(5) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 5 ಎಸ್‌ಆರ್‌ಪಿ 1996, ದಿನಾಂಕ:15.05.1997.

(6) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 5 ಎಸ್‌ಆರ್‌ಪಿ 1996, ದಿನಾಂಕ:11.12.1998.

(7) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 38 ಎಸ್‌ಆರ್‌ಪಿ 2005, ದಿನಾಂಕ:16.07.2005.

(8) ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 51 ಎಸ್‌ಆರ್‌ಪಿ 2007, ದಿನಾಂಕ:29.12.2007.

**ಪ್ರಸ್ತಾವನೆ:**

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ **ನಿಯಮ 16** ರಲ್ಲಿ 'Scrutiny of claims by Controlling Officers' ರಡಿಯಲ್ಲಿ ನಿಯಂತ್ರಣಾಧಿಕಾರಿಗಳು ವೈದ್ಯಕೀಯ ವೆಚ್ಚ ಮರುಪಾವತಿಯ ಕ್ಲೇಮುಗಳನ್ನು ಪರಿಶೀಲಿಸುವಲ್ಲಿ ಪರಿಗಣಿಸಬೇಕಾಗಿರುವ ಅಂಶಗಳ ಬಗ್ಗೆ ಹಾಗೂ ದಾಖಲೆಗಳ ಬಗ್ಗೆ ನಿರ್ದಿಷ್ಟಪಡಿಸಲಾಗಿದೆ. ಈ ನಿಯಮದಲ್ಲಿನ ಅಂಶಗಳು ಎಲ್ಲಾ ರೀತಿಯ ಅಂದರೆ ಹೊರರೋಗಿಯಾಗಿ (ನಿರ್ದಿಷ್ಟಪಡಿಸಿದ ದೀರ್ಘಕಾಲಿಕ ಕಾಯಿಲೆಗಳಿಗೆ)/ ಒಳರೋಗಿಯಾಗಿ ಪಡೆದ ಚಿಕಿತ್ಸೆಗಳ ಮರುಪಾವತಿಯ ಕ್ಲೇಮುಗಳಿಗೆ ಸಾಮಾನ್ಯವಾಗಿ ಅನ್ವಯಿಸುತ್ತವೆ. ಅದರಂತೆ ಸರ್ಕಾರಿ ನೌಕರರು ವೈದ್ಯಕೀಯ ವೆಚ್ಚ ಮರುಪಾವತಿ ಕ್ಲೇಮು ಸಲ್ಲಿಸುವ ಸಂದರ್ಭದಲ್ಲಿ ಮತ್ತು ಮುಂದುವರೆದ ಚಿಕಿತ್ಸೆಗೆ ಪ್ರತಿ ಬಾರಿ ಔಷಧಿ ಖರೀದಿಸುವ ಸಂದರ್ಭದಲ್ಲಿ ವೈದ್ಯರಿಂದ ಸಲಹಾ ಚೀಟಿ (Prescription) ಹಾಗೂ ಔಷಧಿ ಖರೀದಿ ಬಿಲ್ಲುಗಳ ಮೇಲೆ ವೈದ್ಯಾಧಿಕಾರಿಗಳು/ ವೈದ್ಯರ ಮೊಹರಿನೊಂದಿಗೆ ಸಹಿ ಪಡೆಯುವುದು ನಿಯಮಗಳನುಸಾರ ಕಡ್ಡಾಯವಿರುತ್ತದೆ.

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963 ರನ್ವಯ ಗ್ರೂಪ್ 'ಸಿ' ಮತ್ತು 'ಡಿ' ವರ್ಗದ ನೌಕರರುಗಳಿಗೆ ಆರ್ಥಿಕ ಇಲಾಖೆಯು ಮೇಲೆ ಓದಲಾದ (4) ರಿಂದ (8) ರವರೆಗೆ ಹೊರಡಿಸಿರುವ ವಿವಿಧ ಆದೇಶಗಳಲ್ಲಿ ಗುರುತಿಸಿರುವ ಈ ಕೆಳಕಂಡ ದೀರ್ಘಕಾಲಿಕ ಕಾಯಿಲೆಗಳಿಗೆ ಸರ್ಕಾರಿ ಆಸ್ಪತ್ರೆ

. . . 2

ಹಾಗೂ ಸರ್ಕಾರದ ಮಾನ್ಯತೆ ಹೊಂದಿರುವ ಖಾಸಗಿ ಆಸ್ಪತ್ರೆಗಳಲ್ಲಿ ಹೊರರೋಗಿಯಾಗಿ ಪಡೆದ ವೈದ್ಯಕೀಯ ಚಿಕಿತ್ಸೆಯ ವೆಚ್ಚದ ಮರುಪಾವತಿ ಸೌಲಭ್ಯವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ:

> " ಮಧುಮೇಹ (Diabetes), ರಕ್ತದೊತ್ತಡ (Blood Pressure), ಹೃದ್ರೋಗ, ಕ್ಷಯ ರೋಗ, ಅಸ್ತಮಾ, ಅರ್ಬುದ ರೋಗ (Cancer), ಮೂರ್ಛೆರೋಗ (Epilepsy), ಸಂಧಿವಾತ ರೋಗ (Arthritis), ಪಾರ್ಶ್ವವಾಯು, ಜಠರ ಹುಣ್ಣು (Peptic Ulcer), ಅನಿಯಮಿತ ಗರ್ಭಸ್ರಾವ (Dysfunctional Uterine Bleeding) ಮಾನಸಿಕ ಮತ್ತು ನರ ರೋಗಗಳು, ದೀರ್ಘಕಾಲಿಕ ಚರ್ಮ ರೋಗ, ಸಿಕಲ್‌ಸೆಲ್ ರಕ್ತ ಹೀನತೆ (Sickle cell Anaemia), ದೀರ್ಘಕಾಲಿಕ ಮೂತ್ರಕೋಶದ ಸೋಂಕು (Chronic urinary infection), ದೀರ್ಘಕಾಲಿಕ ಅಮೀಬಿಯಾಸಿಸ್ ( Chronic Amoebiasis), ಮೂತ್ರ ಪಿಂಡ ವೈಫಲ್ಯ, ಸೌಂದರ್ಯವರ್ಧಕವಲ್ಲದ/ ಕಾಂತಿವರ್ಧಕವಲ್ಲದ ದಂತ ಚಿಕಿತ್ಸೆ (Non-cosmetic Dental treatment), Osteo Arthritis ಮತ್ತು ಅಧಿಕೃತ ವೈದ್ಯರಿಂದ ದೀರ್ಘಾವಧಿ ಚಿಕಿತ್ಸೆ ಅಗತ್ಯ ಎಂದು ದೃಢೀಕರಿಸಲ್ಪಟ್ಟು, ಅದನ್ನು ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಇವರು ಮೇಲುರುಜು ಮಾಡಿದ ಇತರೆ ಕಾಯಿಲೆಗಳು".

ಮೇಲೆ ಓದಲಾದ(2)ರ ಆದೇಶದಲ್ಲಿ ಗ್ರೂಪ್ "ಎ" ಮತ್ತು "ಬಿ" ವರ್ಗದ ಅಧಿಕಾರಿಗಳಿಗೆ ಕೂಡ ಈ ಸೌಲಭ್ಯವನ್ನು ವಿಸ್ತರಿಸಲಾಗಿದೆ.

ಈ ಸಂಬಂಧ ಮೇಲೆ ಓದಲಾದ (1)ರಲ್ಲಿ ಉಲ್ಲೇಖಿಸಲಾದ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:09.05.2019 ರಂದು ನಡೆದ ಸಭೆಯಲ್ಲಿ, ರಾಜ್ಯ ಸರ್ಕಾರಿ ನೌಕರರು ವೈದ್ಯಕೀಯ ವೆಚ್ಚ ಮರುಪಾವತಿಯನ್ನು ಕೋರಿ ಸಲ್ಲಿಸುವ ಔಷಧಿ ಖರೀದಿಯ ಬಿಲ್ಲುಗಳಿಗೆ ವೈದ್ಯಾಧಿಕಾರಿಯು ಸಹಿ ಮಾಡುವ ಅಗತ್ಯತೆಯ ವಿಷಯ ಚರ್ಚೆಯಾಗಿದ್ದು, ದೀರ್ಘಕಾಲದ ಕಾಯಿಲೆಗಳಿಗೆ ಮುಂದುವರಿದ ಚಿಕಿತ್ಸೆ ಪಡೆಯಲು ಸರ್ಕಾರಿ ಆಸ್ಪತ್ರೆಯ/ ಸರ್ಕಾರದ ಮಾನ್ಯತೆ ಹೊಂದಿರುವ ಖಾಸಗಿ ಆಸ್ಪತ್ರೆಯ ವೈದ್ಯರ ಸಲಹೆ ಚೀಟಿಯನ್ನು ಪಡೆಯಲು ಹಾಗೂ ಖರೀದಿಸುವ ಔಷಧಿಯ ಬಿಲ್ಲುಗಳಿಗೆ ಪ್ರತೀ ಬಾರಿ ವೈದ್ಯಾಧಿಕಾರಿಯ ಸಹಿ/ ಮೊಹರನ್ನು ಪಡೆಯುವಲ್ಲಿ ಸರ್ಕಾರಿ ನೌಕರರಿಗೆ ಮತ್ತು ವೈದ್ಯಾಧಿಕಾರಿಗಳಿಗೆ ಅನಗತ್ಯ ತೊಂದರೆಯಾಗುತ್ತಿರುವುದನ್ನು ಹಾಗೂ ಇದರಿಂದ ವೈದ್ಯಕೀಯ ವೆಚ್ಚ

. . . 3

ಮರುಪಾವತಿಗೆ ಸಂಬಂಧಿಸಿದಂತೆ ವಿಳಂಬವಾಗುತ್ತಿರುವುದನ್ನು ಗಮನಿಸಲಾಗಿದೆ. ಈ ಸಂಬಂಧದಲ್ಲಿ ಅಗತ್ಯ ಕ್ರಮವಹಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಸೂಚನೆಗಳನ್ನು ನೀಡಲಾಗಿದೆ. ಅದರಂತೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 16 ಎಸ್ಎಂಆರ್ 2019,**
**ಬೆಂಗಳೂರು, ದಿನಾಂಕ:05.08.2019.**

1. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 ರಡಿ ರಾಜ್ಯ ಸರ್ಕಾರಿ ನೌಕರರು ಮತ್ತು ಅವರ ಕುಟುಂಬದ ಅವಲಂಬಿತ ಸದಸ್ಯರು ನಿರ್ದಿಷ್ಟಪಡಿಸಲಾದ ದೀರ್ಘಕಾಲಿಕ ಕಾಯಿಲೆಗಳ ಸಂಬಂಧದಲ್ಲಿ ಸರ್ಕಾರಿ ಆಸ್ಪತ್ರೆ ಮತ್ತು ಸರ್ಕಾರದ ಮಾನ್ಯತೆ ಹೊಂದಿರುವ ಖಾಸಗಿ ಆಸ್ಪತ್ರೆಗಳಲ್ಲಿ ಹೊರರೋಗಿಯಾಗಿ ಪಡೆಯುವ ಮುಂದುವರೆದ ಚಿಕಿತ್ಸೆಗಳಿಗೆ ಪ್ರತೀ ತ್ರೈಮಾಸಿಕದಲ್ಲಿ ಕಡ್ಡಾಯವಾಗಿ ವೈದ್ಯರಿಂದ ತಪಾಸಣೆಗೆ ಒಳಪಟ್ಟು ವೈದ್ಯರಿಂದ ಸಲಹಾ ಚೀಟಿ ಪಡೆಯತಕ್ಕದ್ದು.

2. ದೀರ್ಘಕಾಲಿಕ ಕಾಯಿಲೆಗಳ ವೈದ್ಯಕೀಯ ವೆಚ್ಚ ಮರುಪಾವತಿಯ ಕ್ಲೇಮುಗಳೊಂದಿಗೆ ಒದಗಿಸುವ ವೈದ್ಯರ ಸಲಹೆ ಚೀಟಿಯಲ್ಲಿ ಅವಶ್ಯ ಔಷಧಿಗಳಲ್ಲಿ ಯಾವುದೇ Medicine, Strength & dosage ಬದಲಾವಣೆ ಇಲ್ಲದಿದ್ದಲ್ಲಿ ಅಂತಹ ಔಷಧಿ ಖರೀದಿ ಬಿಲ್ಲುಗಳ ಮೇಲೆ ವೈದ್ಯಾಧಿಕಾರಿಗಳ/ ವೈದ್ಯರ ಸಹಿ ಹಾಗೂ ಮೊಹರು ಪ್ರತಿ ತಿಂಗಳು ಪಡೆಯುವ ಅಗತ್ಯವಿರುವುದಿಲ್ಲ. ಆದರೆ, ಪ್ರತಿ ತ್ರೈಮಾಸಿಕದಲ್ಲಿ ವೈದ್ಯರ/ ವೈದ್ಯಾಧಿಕಾರಿಗಳ ಸಹಿ ಹಾಗೂ ಮೊಹರು ಇರುವ ಸಲಹೆ ಚೀಟಿಗಳನ್ನು ಮತ್ತು ಔಷಧಿ ಖರೀದಿ ಬಿಲ್ಲುಗಳನ್ನು ಹಾಜರುಪಡಿಸತಕ್ಕದ್ದು (Medicine, Strength & dosage ಒಂದೇ ಇದ್ದರೂ ಸಹ).

3. ಮುಂದುವರೆದು, ದೀರ್ಘಕಾಲದ ಕಾಯಿಲೆಗಳಿಗೆ ವೈದ್ಯರ ಸಲಹೆ ಚೀಟಿಯಲ್ಲಿ/ ಔಷಧಗಳಲ್ಲಿ ಯಾವುದೇ ಬದಲಾವಣೆಯಾದ (Medicine, Strength & dosage) ಸಂದರ್ಭದಲ್ಲಿ, ವೈದ್ಯರು ನೀಡುವ ಸಲಹಾ ಚೀಟಿಯಲ್ಲಿ ಹಾಗೂ ಅಂತಹ ಔಷಧಿ ಖರೀದಿ ಬಿಲ್ಲುಗಳ ಮೇಲೆ ವೈದ್ಯಾಧಿಕಾರಿಯ ಸಹಿ ಹಾಗೂ ಮೊಹರನ್ನು ಪಡೆಯಲು ಅಗತ್ಯವಾಗಿ ಕ್ರಮವಹಿಸತಕ್ಕದ್ದು.

ಈ ಸೂಚನೆಗಳನ್ನು ತಪ್ಪದೇ ಪಾಲಿಸತಕ್ಕದ್ದು ಮತ್ತು ಇವುಗಳನ್ನು ಇಲಾಖೆಯ ಎಲ್ಲಾ ಅಧಿಕಾರಿ/ನೌಕರರುಗಳ ಗಮನಕ್ಕೆ ತರುವಂತೆಯೂ ಸಹ ಸೂಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

05/08/19
(ಎ.ವಿ.ಶೈಲಜ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-2).

. . . 4

**ಇವರಿಗೆ:**

ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ ವಿಭಾಗ, ಸರ್ಕಾರಿ ಹೊರವಲಯ ಮುದ್ರಣಾಲಯ, ಯೂನಿಟ್-2, ಮೈಸೂರು ರಸ್ತೆ, ಬೆಂಗಳೂರು- ಇದನ್ನು ಕರ್ನಾಟಕ ರಾಜ್ಯಪತ್ರದ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ ಅದರ 200 ಪ್ರತಿಗಳನ್ನು ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಸೇವಾ ನಿಯಮಗಳು-2), ಕೊಠಡಿ ಸಂಖ್ಯೆ: 30, ವಿಧಾನಸೌಧ, ಬೆಂಗಳೂರು-560 001 ಇವರಿಗೆ ಒದಗಿಸಲು (ಮುಖಪತ್ರದೊಂದಿಗೆ)

**ಪ್ರತಿಗಳು:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
4. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
5. ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು.
7. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತು, ವಿಧಾನ ಸೌಧ, ಬೆಂಗಳೂರು.
8. ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ಚಾಣಕ್ಯಪುರಿ, ನವದೆಹಲಿ-110011.
9. ಎಲ್ಲಾ ಇಲಾಖಾ ಮುಖ್ಯಸ್ಥರು.
10. ಎಲ್ಲಾ ಪ್ರಾದೇಶಿಕ ಆಯುಕ್ತರು.
11. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
12. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು-9.
13. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು-9.
14. ನಿರ್ದೇಶಕರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು-560 009.
15. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾ ಆಸ್ಪತ್ರೆಗಳ ಜಿಲ್ಲಾ ವೈದ್ಯಾಧಿಕಾರಿಗಳು.
16. ಮಹಾ ನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
17. ನಿಬಂಧಕರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009.
18. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
19. ನಿಬಂಧಕರು, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಬೆಂಗಳೂರು.
20. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
21. ಸರ್ಕಾರದ ಎಲ್ಲಾ ವಿಶೇಷ/ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.
22. ಸಚಿವಾಲಯದ ಎಲ್ಲಾ ಶಾಖೆಗಳು.
23. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೆಂಗಳೂರು
24. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು.

- www.sachivalaya.karnataka.gov.in ತಂತ್ರಾಂಶದಲ್ಲಿ ಈ ಆದೇಶವನ್ನು ವೀಕ್ಷಿಸಬಹುದು.